ಮೈನೆರೆತ ಹೆಣ್ಣಿನಂತೆ ತಳುಕು ಬಳುಕಿನಲ್ಲಿ ತುಳುಕಾಡುತ್ತಿತ್ತು. ಕಬ್ಬಂತೂ ಎದೆ ಮಟ್ಟ ಗಟ್ಟಿಮುಟ್ಟಾದ ಹುಡುಗನಂತೆ ಬೆಳೆದು ಮರಿಯಪ್ಪನ ಬದುಕಿಗೆ ಕಾವಲಿನಂತೆ ನಿಂತಿತ್ತು. ಮೆಕ್ಕೆಜೋಳ ಗೇಣುದ್ದ ತೆನೆಗಳನ್ನು ಟೊಂಕದಲ್ಲಿ ಇಟ್ಟುಕೊಂಡು ಆಳೆತ್ತರ ಬೆಳೆದಿತ್ತು.

ಕತ್ತಲು ಕರಗಿಸಿ ಬೆಳ್ಳಿ ಬೆಳಕು ಚೆಲ್ಲುತ್ತಾ ಪಡುವಣದಲ್ಲಿ ಸೂರ್ಯ ಏಳತೊಡಗಿದ. ಗುಡಿಸಲಿನಿಂದ ಎದ್ದು ಹಾಸಿಗೆ ಮಡಿಚಿ ಇಟ್ಟು ಮರಿಯಪ್ಪ ಹೊರಗೆ ಬಂದ. ಬೆಳೆದ ಮೆಕ್ಕೆಜೋಳದ ಒಳಗಿಂದ ಸೂರ್ಯ ಎದ್ದೇಳುತ್ತಿರುವಂತೆ ಮರಿಯಪ್ಪನಿಗೆ ಕಂಡಂತಾಗಿ ನಸು ನಕ್ಕ. ಮಗ ಕಲ್ಲ ಊರಿನಿಂದ ನಸುಕಿನಲ್ಲಿಯೇ ಎದ್ದು ಓಡಿ ಬಂದು ಹಿಗ್ಗಿನಿಂದ ಪಂಪ್‌ಸೆಟ್ ಶುರುಮಾಡಿ, ಮೈಯೆಲ್ಲಾ ತೋಯ್ಸಿಕೊಂಡು ಕಬ್ಬಿನ ಹೊಲಕ್ಕೆ ನೀರು ಕಟ್ಟುತ್ತಿದ್ದ. 'ಹೊತ್ತಾತು ಬಾರಪ್ಪ, ಸಾಲಿಗೆ ಹೋಗ್ಬಕು. ನಾನು ಇನ್ನೊಂದಿಷ್ಟು ತಡ್ದ ಬರ್ತೀನಿ. ನೀನಿನ್ನು ಮನಿಗೆ ನಡಿ...' ಎಂದು ಕಲ್ಲನ ಕಡೆಗೆ ಕೂಗು ಹಾಕಿದ. ಕಲ್ಲ ಊರ ದಾರಿ ಹಿಡಿದು ಓಟ ಕಿತ್ತ. ಮರಿಯಪ್ಪ ಮಗ ಹೋದತ್ತ ನೋಡುತ್ತಾ ನಿಂತ. ಕಲ್ಲ ಓಡಿದಂತೆಲ್ಲ ದೂರಾಗುತ್ತಾ ಸಾಗಿದ. ಮರಿಯಪ್ಪ ಕಬ್ಬಿನ ಹೊಲದ ಕಡೆ ನಡೆದ.

★★★

ಅಂದು ಮಧ್ಯಾಹ್ನದ ಬಿಸಿಲು ಎದೆಯೊಳಗೆ ಸಂಕಟವನ್ನು ಉಕ್ಕಿಸತೊಡಗಿತ್ತು. ಹೊಲದ ಕಣದಲ್ಲಿ ಮೆಕ್ಕೆಜೋಳದ ತೆನೆ ಮುರಿದು, ಯಂತ್ರದಿಂದ ಕಾಳು ಬೇರ್ಪಡಿಸಿ ರಾಶಿ ಹಾಕಿದ್ದ ಕಾಳನ್ನು ಬಿಸಿಲಿಗೆ ಹರವಿದ್ದ ಮರಿಯಪ್ಪ. ಬಿಸಿಲಿಗೆ ಬೆನ್ನೊಡ್ಡಿದ ಮರಿಯಪ್ಪನ ಮೈಯೆಲ್ಲಾ ಬೆವೆತು ನೀರು ನೀರಾಗಿ ಹೋಗಿತ್ತು. ಮೈಯೆಲ್ಲಾ ಸೀಗರ ಆದಂತಾಗಿ ಅಂಗಿ ಧೋತರ ಕಳೆದು, ಬಕ್ಕಣದಲ್ಲಿಯ ಚೀಟಿ, ತಂಬಾಕು, ಎಲೆ, ಅಡಿಕೆ ತೆಗೆದು ಅಲ್ಲೇ ಕಣದ ಅಂಚಿನಲ್ಲಿ ಇಟ್ಟು, ಗಾಳಿಗೆ ಹಾರಿ ಹೋದವೆಂದು ಅವುಗಳ ಮೇಲೆ ಸಣ್ಣದೊಂದು ಕಲ್ಲು ಹೇರಿದ. ಸೀದಾ ಹೋಗಿ ಪಂಪ್‌ಸೆಟ್ ಚಾಲೂ ಮಾಡಿ ತಣ್ಣನೆ ನೀರಿಗೆ ಮೈಯೊಡ್ಡಿದ. ಸಣ್ಣದೊಂದು ಕರಿಯ ಕಲ್ಲು ತಗೊಂಡು ಮೈಯೆಲ್ಲಾ ತಿಕ್ಕಿದರೆ ಕರಿಯ ಮಣ್ಣು ಬಡಗಿಯ ಬಾಚಿಯಿಂದ ಕೆತ್ತಿದ ತೊಗಟೆಯ ಚಕ್ಕೆಯಂತೆ ಏಳತೊಡಗಿತ್ತು. ಮೈಯೆಲ್ಲಾ ತಿಕ್ಕಿ, ತೊಳೆದು, ಧೋತರ, ಅಂಗಿಯನ್ನು ನೀರಲ್ಲಿ ಮುಳುಗಿಸಿ, ತಿಕ್ಕಿ, ನುರಿಯಾಗಿ ಹಿಂಡಿ ಹಾಕಿಕೊಂಡು ಮತ್ತೆ ಕಣದ ಕಾಳಿನೊಂದಿಗೆ ಆಡಲು ಶುರುಮಾಡಿದ. ಅತ್ತಗಿಂದ ಚೆನ್ನಮ್ಮ ಗಂಡನಿಗೆ ಬುತ್ತಿ ಹೊತ್ತು ಸಣ್ಣದೊಂದು ಬಿಂದಿಗೆ ನೀರು ಬಗಲಲ್ಲಿ ಇಟ್ಟುಕೊಂಡು ಬರತೊಡಗಿದ್ದಳು. ನೋಡಿದ ಮರಿಯಪ್ಪ ಕೆಲಸ ಕೈಬಿಟ್ಟು, ತಾಳ ಹಾಕುತ್ತಿದ್ದ ಹೊಟ್ಟೆ ಹಸಿವನ್ನು ತಣಿಸಬೇಕೆಂದು ಕಣದ ಮಗ್ಗುಲಿನಲ್ಲಿ ಬದುವಿನಲ್ಲಿದ್ದ ಬೇವಿನ ಗಿಡದ ನೆರಳ ಕಡೆಗೆ ಬಂದ. ರೊಟ್ಟಿ, ಹೆಸರುಕಾಳು ಪಲ್ಯ, ಕೆಂಪಿಂಡಿ, ಮೊಸರು, ಗುರೆಳ್ಳು ಚಟ್ನಿ, ಶೇಂಗಾ ಚಟ್ನಿ ಎಲ್ಲಾ ಹದವಾಗಿ ತುಂಬಿದ್ದ ಬುತ್ತಿ ಬಿಚ್ಚುತ್ತಲೇ

